ದಿನಾಂಕ ಃ 29.07.2024
ಅಸಲು ದಾವೆಃ 54/2011
ಡಿ.ಡಬ್ಲ್ಯೂ: 3

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲು ಃ ವಾದಿ ಪರ ವಕೀಲರಾದ ಶ್ರೀ ಹೆಚ್.ಪಿ.ಎಸ್ ರವರಿಂದ</u>**

ನಿಮ್ಮ ತಾತ ಗದ್ದೆಯನ್ನು ಯಾವ ಇಸವಿಯಲ್ಲಿ ಖರೀದಿಸಿದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಮನೆಯನ್ನು ನನ್ನ ತಾತ ಮತ್ತು ನನ್ನ ತಂದೆ ಇಬ್ಬರು ಸೇರಿ ಕಟ್ಟಿಸಿರುತ್ತಾರೆ. ಮೂಲ ಮನೆಯನ್ನು ನಾನು ಹುಟ್ಟುವ ಮುಂಚೆಯೇ ಕಟ್ಟಿರುತ್ತಾರೆ. ಸದರಿ ಮನೆಯನ್ನು ನನ್ನ ತಾತನ ಹೆಸರಿಗೆ ನಿವೇಶನವನ್ನು ಖರೀದಿ ಮಾಡಿ ಕಟ್ಟಿರುವಂತಹ ಮನೆ ಎಂದರೆ ಸರಿ. ಆ ಮನೆಯನ್ನು ಕಟ್ಟುವ ಕಾಲಕ್ಕೆ ನಮ್ಮ ತಂದೆಗೆ ಸುಮಾರು 22 ರಿಂದ 23 ವರ್ಷ ವಯಸ್ಸಾಗಿತ್ತು. ಗದ್ದೆಯ ಕ್ರಯ ಪತ್ರವನ್ನಾಗಲಿ ಮನೆಯ ನಿವೇಶನದ ಕ್ರಯ ಪತ್ರವನ್ನಾಗಲಿ ನಾನು ನೋಡಿರುವುದಿಲ್ಲ. ಕ್ರಯದ ಪತ್ರಗಳನ್ನು ಕ್ರಯ ಮಾಡಿಕೊಂಡವರು ನಿಮ್ಮ ತಾತ ಎಂದು ಅವರ ಹೆಸರು ಮಾತ್ರ ನಮೂದಿದೆ ಎಂದರೆ ಸಾಕ್ಷಿ ಹೌದು ಆದರೆ ನಮ್ಮ ತಂದೆ ಸಹಾ ಒಟ್ಟು ಕುಟುಂಬದಲ್ಲಿ ದುಡಿದು ಗಳಿಸಿದ ಹಣದಲ್ಲಿ ತಾತನ ಹೆಸರಿನಲ್ಲಿ ಖರೀದಿಸಿದ್ದಾರೆ ಎಂದು ಉತ್ತರಿಸುತ್ತಾರೆ. ಸದರಿ ಕ್ರಯ ಪತ್ರಗಳ ದೃಢೀಕೃತ ನಕಲುಗಳನ್ನು ಪಡೆದು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಏನು ಇರುವುದಿಲ್ಲ. ಮೂಲ ಕ್ರಯಪತ್ರಗಳು ಏನಾದವು ಎಂದರೆ ಸಾಕ್ಷಿ ನಮ್ಮ ತಾತನನ್ನು 6 ನೇ ವಾದಿ ನೋಡಿಕೊಳ್ಳುತ್ತಿದ್ದರು, ನನ್ನ ತಾತ ತೀರಿಕೊಂಡ ದಿನವೇ ಬೀರುವಿನ ಬಾಗಿಲು ಹೊಡೆದು ಕ್ರಯಪತ್ರಗಳನ್ನು ಮತ್ತು ಹಣ ಹಾಗೂ ಒಡವೆಗಳನ್ನು ಅವರೇ ತೆಗೆದುಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಆ ಬಗ್ಗೆ ದೂರು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಆ ಪತ್ರದ ನಕಲುಗಳನ್ನು ತೆಗೆದುಕೊಂಡು ನಿಮ್ಮ ತಂದೆ ಮತ್ತು ನೀವು ಹಾಜರುಪಡಿಸಲು ತೊಂದರೆ ಏನು ಇರಲಿಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ಆಗಲಿ ನೀವಾಗಲಿ ಇಲ್ಲಿಯವರೆಗೆ ಆ ಕ್ರಯಪತ್ರದ ನಕಲುಗಳನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ನಮ್ಮ ತಂದೆ ತೆಗೆದುಕೊಂಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ, ನನಗೆ ಕಾಲಾವಕಾಶ ಕೊಟ್ಟರೆ ತೆಗೆದುಕೊಂಡು ಹಾಜರುಪಡಿಸುತ್ತೇನೆ ಎಂದು

ಉತ್ತರಿಸುತ್ತಾರೆ. ಎಲ್ಲಾ ಆಸ್ತಿಗಳು ನಿಮ್ಮ ತಾತನವರ ಸ್ವಂತ ಆದಾಯದಿಂದ ಖರೀದಿಸಿರುವ ಸ್ವಯಾರ್ಜಿತ ಆಸ್ತಿಗಳು, ಆ ಕಾರಣಕ್ಕಾಗಿಯೇ ಆ ಕ್ರಯ ಪತ್ರಗಳನ್ನು ಹಾಜರು ಪಡಿಸುತ್ತಿಲ್ಲ ಎಂದರೆ ಸಾಕ್ಷಿ ನನ್ನ ತಾತ ಮತ್ತು ತಂದೆಯ ಆದಾಯದಿಂದ ಖರೀದಿಸಿದ ಆಸ್ತಿಗಳು ಎಂದು ಉತ್ತರಿಸುತ್ತಾರೆ. ಸದರಿ ಕ್ರಯ ಪತ್ರಗಳ ಮೂಲ ಪತ್ರಗಳು 6 ನೇ ವಾದಿ ಕದ್ದಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೀರಿ, ಸದರಿ ಪತ್ರಗಳು ನಿಮ್ಮ ತಂದೆಯ ಬಳಿ ಇದ್ದವು, ಅವರು ತೀರಿಕೊಂಡ ನಂತರ, ಈಗಲೂ ನಿಮ್ಮ ಬಳಿ ಇದೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.

MR 23/92-93 ಅಂಗೀಕಾರ ಮಾಡುವಂತೆ ಯಾರು ಸಂಬಂಧಪಟ್ಟ ಇಲಾಖೆಗೆ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ನಂಜಾಚಾರಿಯವರು ಸಲ್ಲಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. ಆ ಅರ್ಜಿಗಳನ್ನು ನಾನು ನೋಡಿರುವುದಿಲ್ಲ. ಸಾಕ್ಷಿ ಮುಂದುವರೆದು ಆ ಅರ್ಜಿಗಳನ್ನು 6 ನೇ ವಾದಿ ತಾಲ್ಲೂಕು ಕಚೇರಿಯಲ್ಲಿ ನಾಶಪಡಿಸಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಅರ್ಜಿಗಳನ್ನು ನಾನು ಓದಿರುವುದಿಲ್ಲ. MR 23/92-93 ರಲ್ಲಿ ಜಮೀನುಗಳು ಇವೆ. ಸದರಿ MR 23/92-93 ನಲಿ ಎರಡು ಜಮೀನುಗಳು ನನ್ನ ತಂದೆ ಹಾಗೂ ನಂಜಾಚಾರಿಯವರಿಗೆ ಭಾಗ ಆಗಿದೆ. MR 23/92-93 ರಲ್ಲಿ ಎರಡು ಜಮೀನುಗಳು ಸೇರಿಸಲಾಗಿತ್ತಾ ಅಥವಾ ಇಲ್ಲವಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. MR 23/92-93 ನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಕಾಲಾವಕಾಶ ಕೊಟ್ಟರೆ ಎಲ್ಲಾವನ್ನೂ ಪಡೆದು ಹಾಜರು ಪಡಿಸುತ್ತೇನೆ ಎಂದು ಉತ್ತರಿಸುತ್ತಾರೆ.

ವಿಭಾಗದಲ್ಲಿ ನಿಮ್ಮ ತಾತನ ಭಾಗಕ್ಕೆ ಯಾವುದಾದರೂ ಸ್ವತ್ತು ಕೊಡಲಾಗಿತ್ತಾ ಎಂದರೆ ಸಾಕ್ಷಿ ಪಶ್ಚಿಮ ಭಾಗದ ಒಪ್ಪಾರು ಕೊಡಲಾಗಿತ್ತು ಎಂದು ಉತ್ತರಿಸುತ್ತಾರೆ. ನಿಮ್ಮ ತಾತ ತೀರಿಕೊಂಡ ನಂತರ ಸದರಿ ಒಪ್ಪಾರನ್ನು ಹಂಚಿಕೊಂಡಿದ್ದೀರಾ ಎಂದರೆ ಸಾಕ್ಷಿ ಅಜ್ಜಿ ಬದುಕಿರುವುದರಿಂದ ಆ ರೀತಿ ಆಲೋಚನೆ ಮಾಡಿಲ್ಲ ಎಂದು ಉತ್ತರಿಸುತ್ತಾರೆ. 1992 ರಲ್ಲಿ ಭಾಗ ಆಗಿರುವುದಾಗಿ ನೀವು ಹೇಳುವ ವಿಭಾಗದಲ್ಲಿ ನಿಮ್ಮ ತಂದೆ ಹಾಗೂ ಚಿಕ್ಕಪ್ಪನಿಗೆ ಸಮವಾಗಿ ಭಾಗ ಆಯಿತಾ ಎಂದರೆ ಸಾಕ್ಷಿ ನನ್ನ ತಂದೆ ಹಿರಿಯ ಮಗನಾಗಿದ್ದ ಕಾರಣ ಅವರಿಗೆ ಒಂದು ಹೊಲದಲ್ಲಿ 1 ಗುಂಟೆ ಹೆಚ್ಚಿಗೆ ಕೊಟ್ಟಿದ್ದಾರೆ, ನನ್ನ ಚಿಕ್ಕಪ್ಪನಿಗೆ 11 ಗುಂಟೆ ಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ಸ್ವತ್ತುಗಳನ್ನು ನಿಮ್ಮ ತಂದೆ ಮತ್ತು ತಾತ ಇಬ್ಬರೇ ಅರ್ಜಿಸಿದ್ದಾರೆ ಎಂದು ಹೇಳಿದ್ದೀರಿ, ನೀವು ಹೇಳುವ ವಿಭಾಗದಲ್ಲಿ ಆಸ್ತಿಗಳನ್ನು ನಿಮ್ಮ ತಾತ ಮತ್ತು ತಂದೆ ಇಬ್ಬರೇ ಭಾಗ ಮಾಡಿಕೊಂಡು ಹಂಚಿಕೊಂಡರಾ ಎಂದರೆ ಸಾಕ್ಷಿ ಇಲ್ಲ,

ಪಂಚರ ಸಮಕ್ಷಮದಲ್ಲಿ ಇಬ್ಬರು ಗಂಡು ಮಕ್ಕಳಿಗೆ ಹಂಚಿಕೆ ಮಾಡಿದರು ಎಂದು ಉತ್ತರಿಸುತ್ತಾರೆ. ನೀವು ನಿಮ್ಮ ಸಾಕ್ಷ್ಯದಲ್ಲಿ ಮಕ್ಕಳ ಪೈಕಿ ನಿಮ್ಮ ತಂದೆ ಮಾತ್ರ ಸಂಪಾದನೆ ಮಾಡಿ ನಿಮ್ಮ ತಾತನ ಜೊತೆ ಆಸ್ತಿ ಖರೀದಿಸಿದ್ದಾರೆ ಎಂದು ಹೇಳಿದ್ದೀರಿ, ಆದರೂ ಯಾವ ವಿಶೇಷ ಕಾರಣಕ್ಕಾಗಿ ಆಸ್ತಿಗಳಲ್ಲಿ ನಿಮ್ಮ ಚಿಕ್ಕಪ್ಪನಿಗೂ ಹಂಚಿಕೆ ಮಾಡಿದರೂ ಎಂದರೆ ಸಾಕ್ಷಿ ನನ್ನ ತಾತನಿಗೆ ಇಬ್ಬರು ಗಂಡು ಮಕ್ಕಳಾಗಿದ್ದರಿಂದ ಹಂಚಿಕೆ ಮಾಡಿಕೊಟ್ಟರು ಎಂದು ಉತ್ತರಿಸುತ್ತಾರೆ. ನಿಮ್ಮ ಪ್ರಕಾರ ನಿಮ್ಮ ತಂದೆ ಒಬ್ಬರೇ ಸಂಪಾದನೆ ಮಾಡಿ ತಾತನ ಜೊತೆ ಆಸ್ತಿ ಖರೀದಿಸಿದ್ದಾರೆ, ಆದರೂ ನಿಮ್ಮ ಚಿಕ್ಕಪ್ಪನಿಗೂ ಆಸ್ತಿ ಹಂಚಿಕೆ ಮಾಡಿಕೊಟ್ಟಿದ್ದಾರೆ ಯಾವ ಕಾರಣಕ್ಕಾಗಿ ಹೆಣ್ಣು ಮಕ್ಕಳಿಗೆ ಭಾಗ ಕೊಡಲಿಲ್ಲ ಎಂದರೆ ಸಾಕ್ಷಿ ಅವರೆಲ್ಲರೂ ಮದುವೆ ಮಾಡಿಕೊಂಡು ಗಂಡನ ಮನೆಗೆ ಹೋಗಿದ್ದರು, ಹಾಗಾಗಿ ದಾವಾ ಸ್ವತ್ತುಗಳಲ್ಲಿ ಅವರಿಗೆ ಹಕ್ಕಿಲ್ಲ ಎಂದು ಉತ್ತರಿಸುತ್ತಾರೆ. ಈ ಕೇಸಿಗೋಸ್ಕರ ನೀವು ನಿಮ್ಮ ತಂದೆ ಮಾತ್ರ ಸಂಪಾದನೆ ಮಾಡಿ ಜೊತೆಗೆ ನಿಮ್ಮ ತಾತ ಸಂಪಾದನೆ ಮಾಡಿ ಆಸ್ತಿ ಖರೀದಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೀರಿ, ಆ ಸ್ವತ್ತುಗಳನ್ನು ನಿಮ್ಮ ತಾತ ಒಬ್ಬರೇ ಒಟ್ಟು ಕುಟುಂಬದ ಪರವಾಗಿ ಖರೀದಿಸಿರುವುದು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಮ್ಮ ತಾತ ಒಬ್ಬರೇ ಸಂಪಾದನೆ ಮಾಡಿ ಒಟ್ಟು ಕುಟುಂಬದ ಪರವಾಗಿ ಆಸ್ತಿ ಖರೀದಿಸಿರುವುದರಿಂದ ನಿಮ್ಮ ತಂದೆ ನಿಮ್ಮ ಚಿಕ್ಕಪ್ಪನಿಗೆ ಭಾಗ ಕೊಟ್ಟಿರುವುದಾಗಿ ಸುಳ್ಳು ತೋರಿಸಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

ಅಸಲು ದಾವಾ 100/1993 ಈ ನ್ಯಾಯಾಲಯಕ್ಕೆ ವರ್ಗಾವಣೆ ಆಗಿ ಅಸಲು ದಾವೆ 29/2000 ಎಂದು ನೊಂದಣಿ ಆಗಿ ತೀರ್ಪು ಆಗಿದ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸದರಿ ತೀರ್ಪು ಈ ದಾವೆಯಲ್ಲಿ ನಿಪಿ.10 ಎಂದು ನಿಶಾನೆಯಾಗಿದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ತಂದೆ ನೇಮಕ ಮಾಡಿಕೊಂಡಿದ್ದ ವಕೀಲರೆಲ್ಲರನ್ನೂ ಸಹಾ ನಾನು ವಕೀಲರನ್ನಾಗಿ ನೇಮ ಮಾಡಿಕೊಂಡಿದ್ದೇನೆ ಎಂದರೆ ಸರಿ. ಅಸಲು ದಾವಾ 100/1993 ರಲ್ಲಿ ನನ್ನ ತಂದೆ ಹೇಳಿರುವ ವಿಚಾರಗಳೆಲ್ಲವೂ ನನಗೆ ಗೊತ್ತಿದೆ. ಸದರಿ ದಾವೆಯ ತೀರ್ಪು ನಿಮ್ಮ ತಂದೆಯ ವಿರುದ್ದವಾಗಿ ಸಹಾ ಆಗಿದೆ ಎಂದರೆ ಸಾಕ್ಷಿ ಇಲ್ಲ ನನ್ನ ತಂದೆಯ ಪರವಾಗಿ ಇದೆ ಎಂದು ಉತ್ತರಿಸುತ್ತಾರೆ. ಸದರಿ ಮೇಲೆ ಹೇಳಿದ ದಾವೆಯಲ್ಲಿ ನಿಮ್ಮ ತಂದೆಯ ವಿರುದ್ದವಾಗಿ ಸಹಾ ತೀರ್ಪು ಆಗಿದ್ದರೂ ಈ ಕೇಸಿಗೋಸ್ಕರ ನನ್ನ ತಂದೆಯ ಪರವಾಗಿ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ನಾನು ಸುಳ್ಳು ಹೇಳುತ್ತಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಅಸಲು ದಾವಾ 100/93 ಹೊಸ ನಂಬರ್ 29/2000 ದಾವೆಯ ತೀರ್ಪಿನಲ್ಲಿ ನ್ಯಾಯಾಲಯ ದಾವಾ ಸ್ವತ್ತುಗಳೆಲ್ಲವೂ ಒಟ್ಟು

ಕುಟುಂಬದ ಸ್ವತ್ತುಗಳು ಎಂದು ತೀರ್ಪು ನೀಡಿದೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಸದರಿ ಆದೇಶದ ವಿರುದ್ದ ಆ ದಾವೆಯ ವಾದಿಯರು RFA 384/2002 ರಂತೆ ಮಾನ್ಯ ಉಚ್ಛ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಿದ್ದು, ಅದು ಸಹಾ ತೀರ್ಪು ಆಗಿದೆ ಅದನ್ನು ನೋಡಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ತಿಳಿದುಕೊಂಡಿದ್ದೇನೆ ಎಂದು ಉತ್ತರಿಸುತ್ತಾರೆ. ಸದರಿ ತೀರ್ಪಿನಲ್ಲಿ ನಿಮ್ಮ ತಂದೆ 1992 ರಲ್ಲಿ ಭಾಗ ಆಗಿದೆ ಎಂದು ಹೇಳಿರುವುದು ಸುಳ್ಳು ಎಂದು ತೀರ್ಪು ನೀಡಿದೆ ಎಂದರೆ ಸಾಕ್ಷಿ ಅಪೀಲು ವಜಾ ಆಗಿದೆ ಎಂದು ಉತ್ತರಿಸುತ್ತಾರೆ. ಅದೇ ರೀತಿ ಸದರಿ ತೀರ್ಪಿನಲ್ಲಿ ಮಾನ್ಯ ಉಚ್ಛ ನ್ಯಾಯಾಲಯ ಎಲ್ಲಾ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತು ಎಂದು ತೀರ್ಮಾನ ನೀಡಿದೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಈ ನ್ಯಾಯಾಲಯದಲ್ಲಿ ಅಸಲು ದಾವಾ 100/1993 ಹೊಸ ನಂಬರ್ 29/2000 ದಾವೆಯಲ್ಲಿ ಮತ್ತು ಮಾನ್ಯ ಉಚ್ಛ ನ್ಯಾಯಾಲಯದ RFA 384/2002 ರಲ್ಲಿ ಎಲ್ಲಾ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳು ಎಂದು ತೀರ್ಮಾನ ಆದ ಮೇರೆಗೆ ಕುಟುಂಬದ ಎಲ್ಲಾ ಅವಶ್ಯಕ ಪಕ್ಷಗಾರರು ಈ ದಾವೆಯಲ್ಲಿ ವಿಭಾಗ ಕೋರಿ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ಹೆಣ್ಣು ಮಕ್ಕಳಿಗೆ ಹಕ್ಕು ಇಲ್ಲ ಎಂದು ಉತ್ತರಿಸುತ್ತಾರೆ. ಮಾನ್ಯ ಉಚ್ಛ ನ್ಯಾಯಾಲಯದ ತೀರ್ಪು ಆದ ತಕ್ಷಣವೇ ವಾದಿಯರು ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ವಾದಿಯರು ಈ ದಾವೆಯನ್ನು ಕಾಲಮಿತಿಯ ಒಳಗೆ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ಸಲ್ಲಿಸಿದ್ದಾರೆ ಎಂದು ಉತ್ತರಿಸುತ್ತಾರೆ. ವಿಭಾಗ ಕೋರಿ ದಾವೆ ಸಲ್ಲಿಸಲು ಯಾವುದೇ ಕಾಲಮಿತಿ ಇರುವುದಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಾವೆಯ ಯಾವುದೇ ವಿಚಾರಗಳು ನಿಮಗೆ ಗೊತ್ತಿಲ್ಲದೆ ಇದ್ದರೂ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.